# 2014-15 ನೇ ಸಾಲಿಗೆ ಆಯ್ಕೆಯಾದ ಹಾವೇರಿ ಜಿಲ್ಲೆಯ ಯುವ ಕೃಷಿಕ

## ಆವಿಷ್ಕಾರ ಮಾಡಿದ ಯುವ ಕೃಷಿಕ



**ಶ್ರೀ ಮಲ್ಲಿಕಾರ್ಜುನ ಚನ್ನಬಸಪ್ಪ ನೆಗಳೂರ**
ಗ್ರಾಮ: ಅಸುಂಡಿ
ತಾ: ರಾಣೇಬೆನ್ನೂರು  ಜಿ: ಹಾವೇರಿ
ಮೊ: 9742442851




ಕೃಷಿಯನ್ನು ಲಾಭದಾಯಕವನ್ನಾಗಿ ಮಾಡಿಕೊಂಡು ಇತರರಿಗೆ ಮಾದರಿಯಾದ ರೈತರು ಬೆರಳೆಣಿಕೆಯಷ್ಟು ಮಾತ್ರ. ಇಂತಹ ಮಾದರಿ ರೈತರಲ್ಲಿ ಒಬ್ಬರು ರಾಣೇಬೆನ್ನೂರು ತಾಲ್ಲೂಕಿನ ಅಸುಂಡಿ ಗ್ರಾಮದವರಾದ ಶ್ರೀ ಮಲ್ಲಿಕಾರ್ಜು ಚ. ನೆಗಳೂರ ರವರು ತಮ್ಮ 12 ಎಕರೆ ಜಮೀನಿನಲ್ಲಿ ಕೃಷಿ ಬೆಳೆಗಳಾದ ಹತ್ತಿ, ಗೋವಿನ ಜೋಳ, ಹೆಸರು, ಉದ್ದು, ಅಲಸಂದಿ, ಸೋಯಾ ಅವರೆ, ಬೆಳ್ಳುಳ್ಳಿ, ಗುರೆಳ್ಳು. ಆದರೆ ತೊಗರಿ ಈರುಳ್ಳಿ, ಮೆಣಸಿನಕಾಯಿ, ಹತ್ತಿ ಬೆಳೆಯಲ್ಲಿ ಅವರೆ ಬೆಳೆಯನ್ನು ಬೆಳೆಯುತ್ತಾರೆ. ತೋಟಗಾರಿಕೆ ಬೆಳೆಗಳಲ್ಲಿ (ಚಿಕ್ಕು, ತೆಂಗು, ಪೇರಲ, ನೆಲ್ಲಿಕಾಯಿ) ಬಳಸುತ್ತಿದ್ದಾರೆ ಮತ್ತು ತೇಗ, ಹೊಂಗೆ ಮತ್ತು ಜೇನುಸಾಕಾಣಿಕೆಯಲ್ಲಿ ಹೆಚ್ಚಿನ ಲಾಭ ಪಡೆಯುತ್ತಿದ್ದಾರೆ. ಇದರ ಜೊತೆ ಹೈನುಗಾರಿಕೆಯಲ್ಲಿ ಹೆಚ್ಚಿನ ಲಾಭ ಪಡೆಯುತ್ತಾರೆ. ನೀರಿನ ಸದ್ಬಳಕೆಗಾಗಿ ಕೃಷಿ ಹೊಂಡ ಹಾಗೂ ಮಳೆ ನೀರು ಕೊಯ್ಲು ವ್ಯವಸ್ಥೆ ಹೊಂದಿದ್ದಾರೆ. ಸಾವಯವ ಕೃಷಿಗೆ ಹೆಚ್ಚಿನ ಒತ್ತು ನೀಡುವ ಇವರು ಎರೆಹುಳು ಗೊಬ್ಬರ ಹಾಗೂ ಬೆಳೆಗಳಿಗೆ ಸಿಗುವ ಹಾಗೆ ವ್ಯವಸ್ಥೆ ಮಾಡಿಕೊಂಡಿದ್ದಾರೆ. ಸಂಪೂರ್ಣವಾಗಿ ಕೃಷಿಯಲ್ಲಿ ತೊಡಗಿಸಿಕೊಂಡ ಇವರು ತೆಂಗಿನ ಗಿಡ ಹಾಗೂ ತೇಗ, ಹೊಂಗೆ ಗಿಡಗಳನ್ನು ಬೆಉಗಳ ಮೇಲೆ ಬೆಳೆಸಿದ್ದಾರೆ. ವರ್ಷಕ್ಕೆ ಸುಮಾರು 1 ಲಕ್ಷದಿಂದ 1.60 ಲಕ್ಷದವರೆಗೂ ಲಾಭವನ್ನು ಪಡೆಯುತ್ತಿದ್ದಾರೆ.

